ಭಾರತದ ಗ್ಯಾಸೆಟಿಯರ್

ಕರ್ನಾಟಕ ರಾಜ್ಯ

# ಕೊಡಗು ಜಿಲ್ಲೆ

ಭಾರತ ಸರಕಾರ

ಕರ್ನಾಟಕ ರಾಜ್ಯ ಗ್ಯಾಸೆಟಿಯರ್

# ಕೊಡಗು ಜಿಲ್ಲೆ

(ಪರಿಷ್ಕೃತ ಆವೃತ್ತಿ)

ಮುಖ್ಯ ಸಂಪಾದಕರು :
**ಸೂರ್ಯನಾಥ ಯು. ಕಾಮತ್**

ಕರ್ನಾಟಕ ರಾಜ್ಯ ಸರಕಾರದ ಪ್ರಕಟಣೆ

©ಕರ್ನಾಟಕ ರಾಜ್ಯ ಸರಕಾರ
ಮುಖ್ಯ ಸಂಪಾದಕರ ಕಚೇರಿ
ಕರ್ನಾಟಕ ಗ್ಯಾಸೆಟಿಯರ್
8ನೇ ಮಹಡಿ, ಜಲಮಂಡಲಿ ಕಟ್ಟಡ
ಕಾವೇರಿ ಭವನ
ಬೆಂಗಳೂರು–560 009

1992

ಪ್ರತಿಗಳು ದೊರೆಯುವ ಸ್ಥಳ :

ನಿರ್ದೇಶಕರು
ಸರಕಾರೀ ಕೇಂದ್ರ ಪುಸ್ತಕ ಮಳಿಗೆ
ಡಾ|| ಅಂಬೇಡ್ಕರ್ ವೀದಿ
ಬೆಂಗಳೂರು–560 001

ಮುಖ್ಯ ಸಂಪಾದಕರ ಕಚೇರಿ
ಕರ್ನಾಟಕ ಗ್ಯಾಸೆಟಿಯರ್
8ನೇ ಮಹಡಿ, ಕಾವೇರಿ ಭವನ
ಬೆಂಗಳೂರು–560 009

ಮುದ್ರಕರು :

ಲಿಪಿ ಮುದ್ರಣ
ಬ್ಯೂಗಲ್‌ರಾಕ್‌ರಸ್ತೆ, ಬಸವನಗುಡಿ
ಬೆಂಗಳೂರು–560 004

# ಮುನ್ನುಡಿ

ರಾಜ್ಯ ಸರಕಾರವು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣಾ ಕಾರ್ಯ ಕೈಕೊಳ್ಳುವ ಉದ್ದೇಶದಿಂದ 1958ರಲ್ಲಿ ಗ್ಯಾಸೆಟಿಯರ್ ಇಲಾಖೆಯನ್ನು ಸ್ಥಾಪಿಸಿತು. ಆಗಲೇ ಮುಂಬೈ ರಾಜ್ಯವು ತಾನು ಸಿದ್ಧಪಡಿಸಿದ್ದ ಧಾರವಾಡ ಜಿಲ್ಲಾ ಗ್ಯಾಸೆಟಿಯರನ್ನು ಕರ್ನಾಟಕ ಸರಕಾರಕ್ಕೆ ಹಸ್ತಾಂತರಿಸಿ, 1959ರಲ್ಲಿ ಅದು ಬಿಡುಗಡೆಯಾಯಿತು. ಮುಂದೆ ಈ ಕಚೇರಿಯು 1990ರಲ್ಲಿ ಬೆಂಗಳೂರು (ನಗರ) ಜಿಲ್ಲಾ ಗ್ಯಾಸೆಟಿಯರ್ ಪ್ರಕಟಿಸಿದಾಗ ರಾಜ್ಯದ ಎಲ್ಲಾ 20 ಜಿಲ್ಲಾ ಗ್ಯಾಸೆಟಿಯರ್‌ಗಳೂ ಪ್ರಕಟವಾದಂತೆ ಆಯಿತು. ಅದಲ್ಲದೆ ಇದೇ ಅವಧಿಯಲ್ಲಿ 1982–83ರಲ್ಲಿ ಕರ್ನಾಟಕ ರಾಜ್ಯ ಗ್ಯಾಸೆಟಿಯರನ್ನೂ (ಎರಡು ಭಾಗಗಳಲ್ಲಿ) ಪ್ರಕಟಿಸಲಾಯಿತು. ಇವೆಲ್ಲಾ ಇಂಗ್ಲಿಷ್ ಪ್ರಕಟಣೆಗಳು, ಇದಲ್ಲದೆ 1984 ರಿಂದ 1986ರ ನಡುವೆ ರಾಜ್ಯ ಗ್ಯಾಸೆಟಿಯರ್ ಅನ್ನು ಕನ್ನಡದಲ್ಲಿ ಮೂರು ಭಾಗಗಳಲ್ಲಿ ಪ್ರಕಟಿಸಲಾಯಿತು. ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಕನ್ನಡದಲ್ಲಿ ಪ್ರಕಟಿಸಬೇಕೆಂಬ ಸಹಜವಾದ ಬೇಡಿಕೆ ಇದ್ದರೂ ಸ್ವಾತಂತ್ರ್ಯೋತ್ತರ ಜಿಲ್ಲಾ ಗ್ಯಾಸೆಟಿಯರ್‌ಗಳ ಇಡೀ ಮಾಲಿಕೆಯನ್ನು ಯಾವ ಭಾಷೆಯಲ್ಲೇ ಆದರೂ ಪೂರ್ತಿಯಾಗಿ ಒಮ್ಮೆಯಾದರೂ ಪ್ರಕಟಿಸಿ ಮುಗಿಸಬೇಕೆಂಬುದು ಇಲಾಖೆಯ ಆತುರವಾಗಿತ್ತು. ಏಕೆಂದರೆ ಸ್ವಾತಂತ್ರ್ಯಪೂರ್ವದಲ್ಲಿ ಕೂಡ ಕರ್ನಾಟಕದ ಎಷ್ಟೋ ಜಿಲ್ಲೆಗಳಿಗೆ ಪ್ರತ್ಯೇಕವಾದ ಒಂದು ಗ್ಯಾಸೆಟಿಯರ್ ಸಂಪುಟ ಇರಲಿಲ್ಲ. ಅಲ್ಲದೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕ್ರಮಬದ್ಧವಾಗಿ ನಡೆಸಲು ಪ್ರತೀ ಜಿಲ್ಲೆಗೂ ಇತ್ತೀಚೆಗಿನ, ಕನಿಷ್ಠ ಸ್ವಾತಂತ್ರ್ಯೋತ್ತರ ಕಾಲದ ಅದರ ಚಿತ್ರಣ ನೀಡುವ ಒಂದು ಕೈಪಿಡಿ ಅವಶ್ಯವಾಗಿತ್ತು. ಇತ್ತೀಚೆಗೆ ಜಿಲ್ಲಾಮಟ್ಟದಿಂದಲೇ ಆರ್ಥಿಕ ಯೋಜನೆಗಳ ತಯಾರಿಕೆ ಹಾಗೂ ಜಿಲ್ಲಾ ಪರಿಷತ್ತುಗಳ ಅಸ್ತಿತ್ವ, ಇಂಥ ಸನ್ನಿವೇಶಗಳಲ್ಲಿ ಜಿಲ್ಲಾ ಗ್ಯಾಸೆಟಿಯರ್‌ನಂಥ ಕೈಪಿಡಿಯೊಂದು ಪ್ರತೀ ಜಿಲ್ಲೆಗೂ ತೀವ್ರ ಅವಶ್ಯಕವಾಗಿದೆ. 1988ರಲ್ಲಿ ಪ್ರಕಟವಾದ ಮೈಸೂರು ಜಿಲ್ಲಾ ಗ್ಯಾಸೆಟಿಯರ್ ಜಿಲ್ಲೆಗೆ ಬೇಕಾದ ಯೋಜನೆಗಳನ್ನು ತಯಾರಿಸಲು ಅತೀ ಉಪಯುಕ್ತವಾಗಿ ಬಳಕೆಗೆ ಬಂತೆಂದು ಆಗಿನ ಮೈಸೂರು ಜಿಲ್ಲಾ ಪರಿಷತ್ ಕಾರ್ಯದರ್ಶಿಗಳು ಹೇಳಿದ್ದರಲ್ಲದೆ ಗ್ಯಾಸೆಟಿಯರ್ ಒದಗಿಸಿದ್ದ ಮಾಹಿತಿಯನ್ನು ತಮ್ಮ ವಾರ್ಷಿಕ ಯೋಜನೆಯ ಪುಟಪುಟಗಳಲ್ಲೂ ಉಲ್ಲೇಖಿಸಿದ್ದರು. ಇಡೀ ಜಿಲ್ಲೆಯ ವಿವಿಧ ಭಾಗಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ

ಹಾಗೂ ಸಂಪನ್ಮೂಲ ಸಂಬಂಧಿ ಮಾಹಿತಿಯನ್ನು ನೀಡುವ ಗ್ಯಾಸೆಟಿಯರ್ ಹಿಂದಿನದರ ಸಿಂಹಾವಲೋಕನ ಮಾಡಿ ಮುಂದೆ ಅಡಿಯಿಡಲು ಮಾಹಿತಿ ಒದಗಿಸುತ್ತದೆ. ಜಿಲ್ಲೆಯ ಒಂದು ಸಮಗ್ರ ಏಕೀಕೃತ ಚಿತ್ರ ನೀಡುತ್ತದೆ.

ರೆ|| ರಿಕ್ಟರ್ ಅವರು 1870ರಲ್ಲಿ ಕೊಡಗು ಜಿಲ್ಲೆಯ ಗ್ಯಾಸೆಟಿಯರ್ ಪ್ರಕಟಿಸಿದ ಮೇಲೆ 1878ರಲ್ಲಿ ಮೈಸೂರಿನ ಜೊತೆಗೇ ಕೊಡಗಿನ ಗ್ಯಾಸೆಟಿಯರನ್ನೂ ರೈಸ್ ಅವರು ಹೊರತಂದಿದ್ದರು. ಅಲ್ಲದೆ ಇಂಪೀರಿಯಲ್ ಗ್ಯಾಸೆಟಿಯರ್ ಮಾಲಿಕೆಯಲ್ಲೂ ಕೊಡಗಿನ ಬಗ್ಗೆ ಸಾರಾಂಶರೂಪಿ ಕಥನ 1908ರಲ್ಲಿ ಬಂದಿತ್ತು. ಇದೇ ರೀತಿ 1926 ರಲ್ಲೂ ಒಂದು ಆವೃತ್ತಿ ಬಂತು. ಸ್ವಾತಂತ್ರ್ಯಾನಂತರ ಶ್ರೀ ಬಿ.ಎನ್. ಶ್ರೀಸತ್ಯನ್ ಅವರು 1965ರಲ್ಲಿ ಕೊಡಗು ಜಿಲ್ಲಾ ಗ್ಯಾಸೆಟಿಯರ್ ಹೊರತಂದರು.

ಈ ಜಿಲ್ಲಾ ಗ್ಯಾಸೆಟಿಯರ್ ಮಾಲಿಕೆ ಮುಗಿದಮೇಲೆ ನಾವು ಮೊದಲಾಗಿ ಧಾರವಾಡ ಜಿಲ್ಲೆಯನ್ನು ಪರಿಷ್ಕೃತ ಆವೃತ್ತಿಗಾಗಿ ಕೈಗೆತ್ತಿಕೊಳ್ಳಬೇಕಾಗಿದ್ದರೂ ಜನಗಣತಿಯ ಅಂಕೆಸಂಖ್ಯೆ ಕೈಸೇರಲು ಆಗುವ ವಿಳಂಬವನ್ನು ಗಮನಿಸಿ ಕಿರು ಜಿಲ್ಲೆಯಾದ ಕೊಡಗನ್ನು ಮೊದಲು ಸಂಕಲನ ಮಾಡಲು ನಿರ್ಧರಿಸಿದೆವು. ಕನ್ನಡದಲ್ಲಿ ನಾವು ಹೊರತರುವ ಮೊದಲ ಜಿಲ್ಲಾ ಗ್ಯಾಸೆಟಿಯರ್ ಕೊಡಗಿನದು. ಈ ಕಚೇರಿ ಪ್ರಕಟಿಸುತ್ತಿರುವ ಪರಿಷ್ಕೃತ ಆವೃತ್ತಿಗಳಲ್ಲೂ ಇದೇ ಮೊದಲಿನದು.

ಕೊಡಗು ಕಿರು ಜಿಲ್ಲೆ. ಗಾತ್ರದಲ್ಲಿ ಅದರದು ರಾಜ್ಯದಲ್ಲಿ 19ನೇಯ ಸ್ಥಾನ; ಆನಂತರ ಬೆಂಗಳೂರು (ನಗರ) ಜಿಲ್ಲೆ, 20ನೇಯ ಸ್ಥಾನದಲ್ಲಿದೆ. ಕೊಡಗು, ಪಶ್ಚಿಮ ಘಟ್ಟದ ಮೇಲೆ ಮೈಚೆಲ್ಲಿಕೊಂಡಿರುವ ಜಿಲ್ಲೆಯಾಗಿ ತನ್ನ ನೈಸರ್ಗಿಕ ಸೌಂದರ್ಯದಿಂದಾಗಿ ಭಾರತೀಯರಿಂದ ದಕ್ಷಿಣದ ಕಾಶ್ಮೀರವೆಂದೂ, ಐರೋಪ್ಯರಿಂದ ಭಾರತದ ಸ್ವಿಟ್ಜರ್‌ಲ್ಯಾಂಡ್ ಅಥವಾ ಸ್ಕಾಟ್‌ಲ್ಯಾಂಡ್ ಎಂದೂ ಕರೆಯಲ್ಪಟ್ಟಿದೆ. ಈ ಕೊಡಗಿಗೆ ವಿಶಿಷ್ಟರಾದ ಕೊಡವರು ಕರ್ನಾಟಕದ ಒಂದು ಹೆಮ್ಮೆಯ ಜನಾಂಗ. ಕೊಡವ ಸ್ತ್ರೀ ಪುರುಷರದು ಆಕರ್ಷಕ ವ್ಯಕ್ತಿತ್ವ. ನಿಸರ್ಗಕ್ಕೆ ಹತ್ತಿರವಾಗಿ ಬಾಳುವ ಇವರು ಸಾಹಸಿಗರು. ಹೀಗಾಗಿ ಭಾರತದ ಭೂಸೇನೆಯ ಮಹಾದಂಡನಾಯಕರಾದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ, ಜ|| ಕೆ.ಎಸ್. ತಿಮ್ಮಯ್ಯನವರು ಆದಿಯಾಗಿ ಅನೇಕ ಶೂರ ಸೈನಿಕರನ್ನು ಕೊಡಗು ದೇಶಕ್ಕೆ ಕೊಟ್ಟಿದೆ. ಕೊಡವರ ಜನಸಂಖ್ಯೆಯ ಪ್ರಮಾಣ ಕಂಡಾಗ ಸೇನೆಯಲ್ಲಿ (ಭೂ, ಜಲ ಮತ್ತು ವಾಯುದಳಗಳ) ಉಚ್ಚಾಧಿಕಾರದಲ್ಲಿ ಇರುವ ಕೊಡವರ ಸಂಖ್ಯಾಬಾಹುಳ್ಯ ಅಚ್ಚರಿ ಹುಟ್ಟಿಸುವಂಥದು. ಅದೇ ರೀತಿ ಭಾರತದ ಕ್ರೀಡಾರಂಗದಲ್ಲೂ ಅವರ ಸಾಧನೆಯ ಮುದ್ರೆ ಎದ್ದು ಕಾಣುವಂಥದ್ದು. ಬ್ರಿಟಿಷರ ಆಗಮನದ ಪೂರ್ವದಲ್ಲಿ ಅಷ್ಟೊಂದು ವಿದ್ಯಾವಂತರಾಗಿರದ ಕೊಡವರು ಶೀಘ್ರವೇ ವಿದ್ಯಾವಂತರೂ ಆಗಿ ದೇಶದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಸರಕಾರೀ ಸೇವೆ, ಬ್ಯಾಂಕಿಂಗ್, ಕೃಷಿ ಸೇವೆ ಹಾಗೂ ವೈದ್ಯಕೀಯ ವೃತ್ತಿ ಮುಂತಾದ ಕ್ಷೇತ್ರಗಳಲ್ಲಿ ವೇಗದ ಪ್ರಗತಿ ಸಾಧಿಸಿದ್ದು ಉಲ್ಲೇಖನೀಯ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಒಮ್ಮೆ ಕೊಡಗು ಸಾಕ್ಷರತೆಯಲ್ಲಿ ಇಡೀ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿ ಇದ್ದ ಜಿಲ್ಲೆಯಾಗಿತ್ತು. ಈಗಲಾದರೂ ಅದು 2–3ನೇಯ ಸ್ಥಾನವನ್ನು ಬಿಟ್ಟುಕೊಟ್ಟಿಲ್ಲ.

ಸಹಕಾರರಂಗದಲ್ಲಿ ಸ್ವಾತಂತ್ರ್ಯಪೂರ್ವದಿಂದಲೂ ಅಪೂರ್ವ ಪ್ರಗತಿ ಸಾಧಿಸಿದ ಜಿಲ್ಲೆಗಳಲ್ಲಿ ಕೊಡಗು ಗಣ್ಯವಾದುದು. ಸಹಕಾರಿ ದವಸಬ್ಯಾಂಕ್‌ಗಳು ಇದಿಗೂ ಇರುವುದು ಕೊಡಗಿನಲ್ಲಿ ಮಾತ್ರ.

ಬೆಟ್ಟಗುಡ್ಡಗಳಿಂದ ತುಂಬಿದ ಈ ಜಿಲ್ಲೆ ಬತ್ತದ ಕೃಷಿಗೆ ಬ್ರಿಟಿಷರ ಆಗಮನದ ಪೂರ್ವದಲ್ಲಿ ಪ್ರಸಿದ್ಧವಾಗಿತ್ತು. ತನಗೆ ಬೇಕಾದುದಕ್ಕೂ ಹೆಚ್ಚು ಬತ್ತ ಬೆಳೆಯುತ್ತಿತ್ತು. ಮುಂದೆ ಕಾಫಿತೋಟಗಳೂ ಬೆಳೆದು ಕರ್ನಾಟಕದಲ್ಲಿ ಕಾಫಿ ಬೆಳೆವ ಜಿಲ್ಲೆಗಳಲ್ಲಿ ಈಗ ಅದರದು ಪ್ರಥಮ ಸ್ಥಾನ. ರಬ್ಬರ್, ಏಲಕ್ಕಿ, ಮೆಣಸುಗಳ ಬೆಳೆಗೂ ಅದು ಪ್ರಸಿದ್ಧ. ಇಲ್ಲಿನ ವನ್ಯ ಪರಿಸರ ಜೇನು ಕೃಷಿಗೂ ಅನುಕೂಲಕರ. ನಾಲ್ಕು ಲಕ್ಷ ಕೆ.ಜಿ. ಜೇನು ತುಪ್ಪ ಕೊಡಗಿನಲ್ಲಿ ಪ್ರತೀವರ್ಷ ಉತ್ಪನ್ನವಾಗುತ್ತದೆ. ಕೊಡಗಿನ ಕಿತ್ತಳೆ ಕೂಡ ಪ್ರಸಿದ್ಧವಾಗಿದ್ದರೂ ಇತ್ತೀಚೆಗೆ ಅದರಲ್ಲಿ ಹಿಂಜರಿತವಾಗುತ್ತಿದೆ. ಕೊಡಗಿನಲ್ಲಿ ವಾಸಿಸುತ್ತಿರುವ ವಿವಿಧ ಬುಡಕಟ್ಟುಗಳ ಜನ ಬೆತ್ತದ, ಬಿದಿರಿನ ಹಾಗೂ ಬೀಳಲಿನ (ಬಳ್ಳಿಗಳ) ಕೆಲಸದಂಥ ವಿವಿಧ ಕರಕುಶಲ ಕಲೆಗಳಲ್ಲಿ ಪರಿಣಿತರು. ಸ್ವಾತಂತ್ರ್ಯಾನಂತರ ಮಲೇರಿಯಾ ಹಾವಳಿಯಿಂದ ಮುಕ್ತವಾದ ಕೊಡಗಿನ ಜನ ಉದ್ಯಮ ಶೀಲರು. ಆದರೆ ಅವರಿಗೂ ಹೆಚ್ಚು ಚಟುವಟಿಕೆಯ ಜನ ಹೊರಗಿನಿಂದ ಬಂದು, ಕೊಡಗಿನ ಮೂಲನಿವಾಸಿಗಳು ಅಲ್ಪಸಂಖ್ಯಾತರಾಗುತ್ತಿರುವರೆಂಬ ಭಯ ಕೊಡಗಿನಲ್ಲಿ ಮೂಡಿದೆ. ಕೊಡಗಿನಲ್ಲಿ ಸಾಮಾಜಿಕ ಅಸಾಮರಸ್ಯ ಮೂಡುತ್ತಿದೆ.

ಕೊಡಗಿನಲ್ಲಿ ಪ್ರವಾಸೋದ್ಯಮಕ್ಕಿರುವ ಅವಕಾಶ ವಿಪುಲ. ಇಲ್ಲಿನ ನೈಸರ್ಗಿಕ ಸೌಂದರ್ಯ, ವನಗಳ, ವನ್ಯಮೃಗಗಳ ಅಭಯಾರಣ್ಯಗಳ ರಮ್ಯತೆ, ಕಾವೇರಿಯ ಉಗಮಸ್ಥಾನವಾದ ತಲಕಾವೇರಿ ಹಾಗೂ ಆ ನದಿಯ ತಟದಲ್ಲಿರುವ ಭಾಗಮಂಡಲ, ನಂಜರಾಯಪಟ್ಟಣ, ಬಲಮುರಿ, ಸುಂಟಿಗುತ್ತಿಗಳಂಥ ಸ್ಥಳಗಳ ರಮ್ಯ ವಾತಾವರಣದ ಕಾಂತೀಯ ಆಕರ್ಷಣೆ ಉಲ್ಲೇಖನೀಯ. ಭಾಗಮಂಡಲ ದೇವಾಲಯದ ವಿನ್ಯಾಸ, ಅಲ್ಲಿನ ಅಪೂರ್ವ ಕಾಷ್ಟಶಿಲ್ಪಗಳ ವೈಶಿಷ್ಟ್ಯಗಳಿಗೆ ಸಿಗಬೇಕಾದ ಪ್ರಚಾರ ಸಿಕ್ಕಿಲ್ಲ. ಇಲ್ಲಿನ ಕೊಡವರ, ಗೌಡಜನಾಂಗದವರ, ಕುಡಿಯರ, ಯೆರವರ, ವಿವಿಧ ಜನವರ್ಗಗಳ ಜಾನಪದ ಕಲೆಗಳ ಸೌಂದರ್ಯ ಜನರಂಜಕ. ಇಲ್ಲಿನ ಸ್ಥಾನಿಕ ದೇವತೆಗಳ ಜಾತ್ರೆಗಳಲ್ಲಿನ ಉತ್ಸಾಹದ ಜಾನಪದ ಕಲೆಗಳ ಪ್ರದರ್ಶನದ ವೈವಿಧ್ಯ, ವೈಶಿಷ್ಟ್ಯ ರೋಮಾಂಚಕ. ಅಬ್ಬಿ, ಅಬ್ಬಿಮಠ, ಬರಪೊಳೆ, ಇರ್ಪುಗಳಂಥ ಜಲಪಾತಗಳ ವೀಕ್ಷಣೆ ಚೇತೋಹಾರಿ. ದುರ್ಗಮ ಬೆಟ್ಟಗಳನ್ನೇರುವ ಚಾರಣ ಸಾಹಸಿಗಳನ್ನು ಇಲ್ಲಿನ ಗಿರಿಶಿಖರಗಳು ಕೈಮಾಡಿ ಕರೆಯುತ್ತಿವೆ.

ಆರ್ಥಿಕವಾಗಿ ಕೊಡಗು ಮುಂದುವರಿದ ಜಿಲ್ಲೆ. ಇಲ್ಲಿನ ತಲಾ ಆದಾಯ ರಾಜ್ಯದ ಸರಾಸರಿ ಆದಾಯಕ್ಕೂ ಹೆಚ್ಚು. ಹಾಗೆಂದಾಗ ಬಡತನದ ರೇಖೆಯ ಕೆಳಗಿರುವ ಜನರ ಸಂಖ್ಯೆಯು ಸಣ್ಣದಲ್ಲ. ಇವರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರು ಹೆಚ್ಚಿದ್ದಾರೆ. ಇಡೀ ರಾಜ್ಯದಲ್ಲಿ ರೈಲು ಸಂಪರ್ಕವಿಲ್ಲದ ಒಂದೇ ಒಂದು ಜಿಲ್ಲೆ ಕೊಡಗಾದರೂ ರಸ್ತೆ ಸಂಪರ್ಕ ಇಲ್ಲಿ ಒಳಿತಾಗಿದೆ. ಶಿಕ್ಷಣ, ಆರೋಗ್ಯ ಸೇವೆಗಳ ವ್ಯವಸ್ಥೆಯಲ್ಲೂ ಸರಕಾರದ ಜೊತೆಗೆ ಸ್ಪರ್ಧಿಸಿ ಶ್ರದ್ಧೆಯಿಂದ ದುಡಿಯುವ ಖಾಸಗಿ

ಸಂಸ್ಥೆಗಳೂ ಇಲ್ಲಿ ಇವೆ. ದಲಿತರ, ಬುಡಕಟ್ಟು ಜನಾಂಗಗಳ ಪ್ರಗತಿಗೂ ಸರಕಾರ ನಡಂಕಟ್ಟಿದೆ. ಅದರ ಚಿತ್ರಣ ನೀಡುವ ಯತ್ನ ಇಲ್ಲಿ ಮಾಡಲಾಗಿದೆ. ಜಿಲ್ಲೆಯಲ್ಲಿ ಕೈಗಾರಿಕಾ ಪ್ರಗತಿ ಅಷ್ಟಿಲ್ಲ; ಆದರೆ ಹೊಸ ಕೈಗಾರಿಕೆಗಳು ಜಿಲ್ಲೆಯ ನೈಸರ್ಗಿಕ ಸ್ವರೂಪವನ್ನು, ಪರಿಸರ ಸಮತೋಲವನ್ನು ರಕ್ಷಿಸಬಲ್ಲವೇ ಎಂಬುದು ಗಮನಿಸ ಬೇಕಾದ ಪ್ರಶ್ನೆ.

ಹಾಲೇರಿ ವಂಶದ ರಾಜರ ಕಾಲದಿಂದ ಕೊಡಗಿಗೆ ಒಂದು ಭೌಗೋಲಿಕ ಪ್ರತ್ಯೇಕತೆ ಇದ್ದಂತೆ ಅಲ್ಲಿನ ಸಾಂಸ್ಕೃತಿಕ ಹಾಗೂ ಆರ್ಥಿಕ ವ್ಯವಸ್ಥೆಯಲ್ಲೂ ವೈಶಿಷ್ಟ್ಯ ಗಳಿವೆ. ಕೊಡಗಿನ ರಾಜರ ಕಾಲದಲ್ಲಿ ಮೂಡಿಬಂದ 'ಜಮ್ಮ' ಎಂಬ ಭೂವ್ಯವಸ್ಥೆ ಇಲ್ಲಿನ ಜನಜೀವನದಲ್ಲಿ ತನ್ನದೇ ಪಾತ್ರವಹಿಸಿದೆ. ಅರಸರ ಆಳಿಕೆ ಮುಗಿದ ಮೇಲೆ ವಿಸ್ತರಿಸಿದ ಶಿಕ್ಷಣ ವ್ಯವಸ್ಥೆ ಹಾಗೂ ತೋಟಗಾರಿಕೆ (ಪ್ಲ್ಯಾಂಟೇಶನ್) ಕೊಡಗಿಗೆ ತನ್ನದೇ ವಿಶಿಷ್ಟ ಛಾಪನ್ನು ನೀಡಿವೆ.

ಕೊಡಗಿನ ಬೆಡಗಿನ ಸಕಲ ಮುಖಗಳ ಪರಿಚಯ ನೀಡುವ ಈ ಗ್ಯಾಸೆಟಿಯರ್ ಸಂಪುಟ ಕೊಡಗಿನ ಸರ್ವತೋಮುಖ ಪ್ರಗತಿಗೆ ಬೇಕಾಗುವ ಜ್ಞಾನರಾಶಿಯ ವಿತರಣೆ ಮಾಡಿ, ಪ್ರಗತಿಗೆ ಕಾರಣಕರ್ತರಾದ ಜನ ಸಮುದಾಯಗಳಿಗೆ ವಿಚಾರ ಪ್ರಚೋದನೆ, ಸ್ಫೂರ್ತಿ, ಮಾರ್ಗದರ್ಶನ ನೀಡಬಹುದೆಂಬ ನಂಬುಗೆ ನಮ್ಮದು. ಇದು ಘಟನೆಗಳ ವರದಿಯಲ್ಲ, ಕೇವಲ ಸರಕಾರೀ ವರದಿಗಳ ನಿರೂಪಣೆಯಲ್ಲ, ಅಂಕೆಸಂಖ್ಯೆಗಳ ಕಂತೆ ಯಲ್ಲ, ಆದರೆ ಕೊಡಗಿನ ಇಡೀ ಪ್ರದೇಶದ, ಇಡೀ ಜನಸಮುದಾಯದ ನಾಡಿಮಿಡಿತ ವನ್ನು, ಜಿಲ್ಲೆಯ ಜೀವನದ ತುಡಿತವನ್ನು ಸೆರೆಹಿಡಿದು ಓದುಗರ ಮುಂದೆ ಮಂಡಿ ಸುವ ಪ್ರಾಮಾಣಿಕವಾದ, ಉತ್ಸಾಹದ ಯತ್ನ.

ಈ ಸಂಕಲನ ಕಾರ್ಯದಲ್ಲಿ ನೆರವಾದ ವ್ಯಕ್ತಿಗಳು ಒಬ್ಬಿಬ್ಬರಲ್ಲ : ಜಿಲ್ಲಾಧಿಕಾರಿ ಗಳಿಂದ ಹಿಡಿದು ಜಿಲ್ಲಾ ಹಾಗೂ ತಾಲೂಕುಮಟ್ಟದ ಸಕಲ ಅಧಿಕಾರಿವರ್ಗ, ಬ್ಯಾಂಕ್, ಸಹಕಾರ ಸಂಸ್ಥೆ, ಶಾಲಾಕಾಲೇಜು ಹಾಗೂ ಸೇವಾಕಾರ್ಯಗಳಲ್ಲಿ ತೊಡಗಿರುವ ಅಸಂಖ್ಯ ವ್ಯಕ್ತಿಗಳ ಸಮುದಾಯವೇ ನಮಗೆ ಬೆಂಬಲವಾಗಿತ್ತು. ಅದರಲ್ಲೂ ವಿಶೇಷವಾಗಿ ನೆರವು ನೀಡಿದ ಶ್ರೀ ಬಿ.ಡಿ. ಗಣಪತಿ, ಶ್ರೀ ಡಿ.ಜೆ. ಪದ್ಮನಾಭ, ಪ್ರೊ॥ ಬಿ.ವಿ. ರಮಣ, ಡಾ॥ ಸಿ. ಚಂಗಪ್ಪ, ಶ್ರೀ ಸುಚೇತನ ಸ್ವರೂಪ, ಶ್ರೀ ಜಿ. ಯದುಮಣಿ, ಪತ್ರಕರ್ತ ಶ್ರೀ ಬಿ.ಎಸ್. ಗೋಪಾಲಕೃಷ್ಣ ಹಾಗೂ ಯು.ಎಂ. ಪೂವಯ್ಯ, ವೀರರಾಜಪೇಟೆಯ ಶ್ರೀ ಕಾಮತ್ ಸೋದರರು (ಗೋಪಾಲ ಮತ್ತು ಗೋವಿಂದ), ಶ್ರೀ ಮನುಶೆಣೈ 'ಆತ್ಮೀಯ' ಸಂಸ್ಥೆಯ ಆರ್ಯ ದಂಪತಿಗಳು, ಕುಟ್ಟದ ಶ್ರೀ ಪಾಲೇಕಂಡ ಅಯ್ಯಣ್ಣ, ಪೊನ್ನಂಪೇಟೆಯ ಶ್ರೀ ಚೆರಿಯಪಂಡ ಕಾಶಪ್ಪ, ಗೋಣಿಕೊಪ್ಪಲಿನ ಡಾ॥ ಡಿ.ಬಿ. ರಾಮಚಂದ್ರಾಚಾರ್, ಮಡಿಕೇರಿಯ ಬಿ.ಎಂ. ಬಿದ್ದಯ್ಯ, ಮಡಿಕೇರಿ ವಸ್ತುಸಂಗ್ರ ಹಾಲಯದ ಶ್ರೀ ಜೋಶಿ, ಬೆಂಗಳೂರಿನ ಶ್ರೀ ಎಂ.ಜಿ. ನಾಗರಾಜ ಇವರೆಲ್ಲ ನಮಗೆ ನೆರವು ನೀಡಿದ ಅನೇಕರಲ್ಲಿ ಉಲ್ಲೇಖನೀಯರು. ಆದರೆ ಇವರಷ್ಟೇ ಅಲ್ಲ. ಎಲ್ಲರ ಹೆಸರು ಹೇಳಲು ಸ್ಥಳಾವಕಾಶವೇ ಕೊರತೆ. ಇವರುಗಳೆಲ್ಲ ತಾವು ನಮ್ಮ ಕೃತಜ್ಞತೆ ಯನ್ನು ಬಯಸದಿದ್ದರೂ ನಮ್ಮ ಋಣಸ್ಮರಣೆಗೆ ಪಾತ್ರರಾದವರು. ಸಲಹಾ ಸಮಿತಿಯ ಸದಸ್ಯರಂತೂ ನೀಡಿದ ಮಾರ್ಗದರ್ಶನ ಅಮೂಲ್ಯ ಹಾಗೂ ಸ್ಮರಣಾರ್ಹ.

ಜಿಲ್ಲೆಯ ಬಗ್ಗೆ ವಿಶೇಷ ತಿಳುವಳಿಕೆ ಪಡೆದ ಶ್ರೀ ಯದುರ್ಕಳ ಕೆ. ಶಂಕರನಾರಾಯಣ ಭಟ್ಟ ಹಾಗೂ ಡಾ॥ ಕಾಳೇಗೌಡ ನಾಗವಾರ ಇವರ ಸಕಾಲಿಕ ಸೂಚನೆಗಳಿಲ್ಲದಿದ್ದರೆ ಈ ಕೃತಿಯಲ್ಲಿ ಅನೇಕ ಗಣ್ಯ ಲೋಪದೋಷಗಳು ಆಗುತ್ತಿದ್ದವು. ಸಲಹಾ ಸಮಿತಿಯ ಸದಸ್ಯರ ಪಟ್ಟಿಯನ್ನು ಪ್ರತ್ಯೇಕವಾಗಿ ಕೊಟ್ಟಿದೆ.

ಈ ಇಲಾಖೆಯ ಎಲ್ಲಾ ನೌಕರರು ಒಂದು ತಂಡದಂತೆ, ತಂಡದ ಯಶಸ್ಸಿನ ಉತ್ಸಾಹದಿಂದ ದುಡಿದು ಈ ಪ್ರಕಟಣೆಯ ಸರ್ವವಿಧದ ಸಾಧ್ಯತೆಗಳಿಗೂ ಕಾರಣ ಕರ್ತರು. ಅವರಿಗೆ ಮುಖ್ಯ ಸಂಪಾದಕನಾಗಿ ನಾನು ಋಣಿ. 'ಜಮ್ಮ' ಭೂವ್ಯವಸ್ಥೆಯ ಬಗ್ಗೆ ನಿವೃತ್ತ ಗಣ್ಯ ಅಧಿಕಾರಿಗಳಾದ ಶ್ರೀ ಎಂ.ಎನ್. ಗುಂಡೂರಾವ್ ಅವರು ಪು. 561 ರಿಂದ ಬಂದಿರುವ ಅಮೂಲ್ಯ ಟಿಪ್ಪಣಿಯನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಇಲ್ಲಿ ಕೊಟ್ಟಿರುವುದು ಅವರ ಆಂಗ್ಲ ಬರಹದ ತರ್ಜಮೆ. ತರ್ಜಮೆಯಲ್ಲಿ ದೋಷಗಳಿದ್ದರೆ ಅದಕ್ಕೆ ಅವರು ಕಾರಣರಲ್ಲ.

ಕೃತಿಯ ಮುದ್ರಣದ ಕಾರಣಕರ್ತರಾದ ಲಿಪಿ ಮುದ್ರಣ, ಅದರ ಮಾಲಿಕ ಶ್ರೀ ಕಿ.ಸ. ಬಾಲಕೃಷ್ಣ ಹಾಗೂ ಅವರ ಸಿಬ್ಬಂದಿಯವರಿಗೆ ನಮ್ಮ ಕೃತಜ್ಞತೆಗಳು. ಇದೇ ರೀತಿ ಉಪಕಾರ ಸ್ಮರಣೆಗೆ ಪಾತ್ರರು ಆಕರ್ಷಕ ಮುಖಪುಟ ಬರೆದ ಕಲಾವಿದ ಶ್ರೀ ಕಮಲೇಶ್, ಹಾಗೂ ನಕಾಶೆ ಬರೆದುಕೊಟ್ಟ ಭೂಸರ್ವೇಕ್ಷಣ ಇಲಾಖೆಯ ಶ್ರೀ ಇಬಕ್ಕನವರ್.

ಈ ಕೃತಿಯ ಇಂಗ್ಲಿಷ್ ಭಾಷಾಂತರ ಈಗಾಗಲೇ ಸಾಗಿದ್ದು 1993ರ ಮಾರ್ಚಿ ಒಳಗೆ ಅದು ಹೊರಬೀಳುವುದು. ಇದಲ್ಲದೆ ಈ ವರ್ಷ ನಮ್ಮ ರಾಜ್ಯ 'ಗ್ಯಾಸೆಟಿಯರ್‌'ಗೆ ಒಂದು ದಶವಾರ್ಷಿಕ ಪುರವಣಿಯನ್ನೂ ಹೊರತರಲಿದ್ದೇವೆ.

4-9-1992

ಸೂರ್ಯನಾಥ್ ಕಾಮತ್
ಮುಖ್ಯ ಸಂಪಾದಕ

# ವಿಷಯ ಸೂಚಿ


| | |
|---|---|
| ಮುನ್ನುಡಿ | v–ix |
| ವಿಷಯ ಸೂಚಿ | x–xiii |
| ಗ್ಯಾಸೆಟಿಯರ್ ಇಲಾಖಾ ಸಲಹಾ ಸಮಿತಿ | xiv |
| ಗ್ಯಾಸೆಟಿಯರ್ ಇಲಾಖೆಯ ಸಿಬ್ಬಂದಿ ವರ್ಗ | xv |
| ಛಾಯಾಚಿತ್ರಗಳು | xvi |

**ಅಧ್ಯಾಯ 1 ಪ್ರಾಸ್ತಾವಿಕ**

ಹೆಸರಿನ ಮೂಲ (1), ಸ್ಥಾನನಿರ್ದೇಶನ ಮತ್ತು ಮೇರೆಗಳು (2), ವಿಸ್ತೀರ್ಣ ಮತ್ತು ಜನಸಂಖ್ಯೆ (3), ಪ್ರಾದೇಶಿಕ ಬದಲಾವಣೆಗಳು (4), ಸ್ವಾಭಾವಿಕ ಲಕ್ಷಣಗಳು (10), ಜಲಸಂಪನ್ಮೂಲಗಳು (13), ಶಿಲಾ ಲಕ್ಷಣ (16), ಖನಿಜ ನಿಕ್ಷೇಪಗಳು (18), ಅಂತರ್ಜಲ (18), ಸಸ್ಯ ಸಂಪತ್ತು (20), ವನ್ಯಪ್ರಾಣಿ ಸಂಪತ್ತು (31), ಅರಣ್ಯ ಸಂಪತ್ತು (37), ವಾಯುಗುಣ (47), ಪರಿಸರ ವರ್ಧನೆ (50). 1–65

ಸಂ. : ಎಸ್. ಎನ್. ರಾಜು
ಎ. ಲಕ್ಷ್ಮೀನರಸಿಂಹನ್

**ಅಧ್ಯಾಯ 2 ಇತಿಹಾಸ**

ಪುರಾಣಗಳು (67), ಇತಿಹಾಸ ಪೂರ್ವಕಾಲ (68), ಗಂಗ ವಂಶ (70), ಚೋಳರು–ಕೊಂಗಾಳ್ವರು (72), ಚಂಗಾಳ್ವರು (74), ತರುವಾಯದ ಚಂಗಾಳ್ವರು (76), ಹೊಯ್ಸಳರು (77), ವಿಜಯನಗರದ ಕಾಲ (80), ಕೊಡಗಿನ ಒಡೆಯರು (82), ದೊಡ್ಡವೀರ ರಾಜೇಂದ್ರ (91), ಲಿಂಗರಾಜೇಂದ್ರ 2 (98), ಚಿಕ್ಕವೀರ ರಾಜೇಂದ್ರ (102), ಬ್ರಿಟಿಷರ ಅಧಿಕಾರಾವಧಿ (105), ಬ್ರಿಟಿಷ್ ವಿರೋಧಿ ಬಂಡಾಯಗಳು (107), ಕೊಡಗಿನಲ್ಲಿ ಸ್ವಾತಂತ್ರ್ಯ ಚಳುವಳಿ (111), ಸ್ವಾತಂತ್ರ್ಯೋತ್ತರ ಕಾಲ (122), ಮಹಾ ಚುನಾವಣೆಗಳು (123). 66–127

ಸಂ. : ಡಾ|| ಸೂರ್ಯನಾಥ ಕಾಮತ್ (ಇತಿಹಾಸ)
ಎಸ್. ಲಕ್ಷ್ಮೀನಾರಾಯಣಶೆಟ್ಟಿ (ಚುನಾವಣೆಗಳು)

**ಅಧ್ಯಾಯ 3 ಜನತೆ**

ಜನಸಂಖ್ಯಾ ಬೆಳವಣಿಗೆ (128), ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳು (146), ಭಾಷೆಗಳು (148), ಧರ್ಮಗಳು (149), ಜಾತಿ ಮತ್ತು ಬುಡಕಟ್ಟುಗಳು (162), ಸಾಮಾಜಿಕ ಜೀವನ (194), ವಿವಾಹ (198), ಶವಸಂಸ್ಕಾರ (205), ಗೃಹ ಜೀವನ 209), ಹಬ್ಬಗಳು (216), ಯಾತ್ರೆಗಳು (219), ಜಾತ್ರೆಗಳು (220), ಶೌರ್ಯ ಪರಂಪರೆ (223). 128–225

ಸಂ. : ಎಸ್. ಎನ್. ರಾಮಚಂದ್ರಯ್ಯ
ದೇವರಕೊಂಡಾರೆಡ್ಡಿ

**ಅಧ್ಯಾಯ 4 ಕೃಷಿ ಮತ್ತು ನೀರಾವರಿ** 226–296

ಕೃಷಿ ಸಂಶೋಧನಾ ಕೇಂದ್ರ (229), ಭೂಮಿಯ ಬಳಕೆ (230), ಮಣ್ಣು (235), ಭತ್ತ (237), ನೀರಾವರಿ (248), ಹಾರಂಗಿ ಜಲಾಶಯ ಯೋಜನೆ (249), ಚಕ್ಲಿಹೊಳೆ ಜಲಾಶಯ ಯೋಜನೆ (251), ಸಣ್ಣ ನೀರಾವರಿ ಯೋಜನೆಗಳು (252), ತೋಟಗಾರಿಕೆ (254), ಕಾಫಿ (258), ಕಾಫಿ ತೋಟಗಳ ಗಣತಿ (263), ಕಾಫಿ ಮಂಡಳಿ (263), ಕಿತ್ತಳೆ (265), ಏಲಕ್ಕಿ (269), ಗೋಡಂಬಿ (272), ರಬ್ಬರ್ (272), ಚಹಾ (273), ತೋಟಗಾರಿಕಾ ಇಲಾಖೆಯ ಕಾರ್ಯಕ್ರಮಗಳು (274), ಪಶುಸಂಗೋಪನೆ (277), ಕೋಳಿ ಸಾಕಣೆ (288), ಹಂದಿಗಳ ಅಭಿವೃದ್ಧಿ (290), ಮೀನುಗಾರಿಕೆ (292).

ಸಂ. : ಎಸ್. ಎನ್. ರಾಜು
ಎ. ಲಕ್ಷ್ಮೀನರಸಿಂಹನ್

**ಅಧ್ಯಾಯ 5 ಕೈಗಾರಿಕೆಗಳು** 297–329

ವಿದ್ಯುತ್ ಸರಬರಾಜು (301), ಕೈಗಾರೀಕರಣ (303), ಇತರ ಕಸಬುಗಳು (315), ಕೆಲವು ಕಿರು ಉದ್ಯಮಗಳು (317), ಜೇನು ಉತ್ಪಾದನೆ (321), ರೇಷ್ಮೆ ಉದ್ಯಮ (326), ಕೈಗಾರಿಕಾ ಸಾಧ್ಯತೆಗಳು (328).

ಸಂ. : ಆರ್. ಮಧ್ವರಾಜ್

**ಅಧ್ಯಾಯ 6 ಬ್ಯಾಂಕಿಂಗ್, ಹಣಕಾಸು, ವ್ಯವಹಾರ** 330–416

ವ್ಯಾಪಾರ ಮತ್ತು ವಾಣಿಜ್ಯ (330), ಜೀತ ಪದ್ಧತಿ (337), ವಾಣಿಜ್ಯ ಬ್ಯಾಂಕುಗಳು (339), ಗ್ರಾಮೀಣ ಬ್ಯಾಂಕು (344), ವಿಮೆ ವ್ಯವಹಾರ (347), ಸಹಕಾರಿ ಸಂಘಗಳು ಮತ್ತು ಸದಸ್ಯತ್ವ (357), ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು (390), ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆ (401).

ಸಂ. : ಎಂ. ಬಿ. ಪಾಟೀಲ್
ಜಿ. ಭಾನುದಾಸ್

**ಅಧ್ಯಾಯ 7 ಸಾರಿಗೆ ಮತ್ತು ಸಂಪರ್ಕ** 417–442

ರಸ್ತೆಗಳ ವರ್ಗೀಕರಣ (421), ಸಾರಿಗೆ ಗಣತಿ (426), ಅಂಚೆ ಮತ್ತು ತಂತಿ ಸೇವೆಗಳು (435), ದೂರವಾಣಿ (438).

ಸಂ. : ಎಸ್. ಲಕ್ಷ್ಮೀನಾರಾಯಣ ಶೆಟ್ಟಿ

**ಅಧ್ಯಾಯ 8 ಆರ್ಥಿಕ ಪ್ರವೃತ್ತಿಗಳು** 443–545

ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಗಳು (445), ನಗರೀಕರಣ (448), ಮಾನವ ಶಕ್ತಿ ಸಂಪತ್ತು (451), ಬೆಲೆಗಳು (474), ಕೂಲಿದರ (481), ಜೀವನ ಮಟ್ಟ (501), ಉದ್ಯೋಗ (502), ಆದಾಯ (507), ಆರ್ಥಿಕ ಯೋಜನೆಗಳು ಮತ್ತು ಸಾಧನೆ (510), ಜಿಲ್ಲಾ ಅಭಿವೃದ್ಧಿ ಯೋಜನೆ ಮತ್ತು ಪ್ರಗತಿ (529), ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ (535), ಪ್ರವಾಹ ಮತ್ತು ಬರಪೀಡನೆ (542), ಅಭಿವೃದ್ಧಿಯ ಅವಕಾಶಗಳು (542).

ಸಂ. : ಎಚ್. ಎಂ. ರಂಗೇಗೌಡ
ಯು. ರಾಮಮೂರ್ತಿ

**ಅಧ್ಯಾಯ 9 ಆಡಳಿತ**

ಜಿಲ್ಲಾಧಿಕಾರಿ (549), ಉಪ ಆಯುಕ್ತರು (552), ಕಂದಾಯ ನಿರೀಕ್ಷಕ (553), ನಾಡಕಚೇರಿಗಳು(554), ಭೂಕಂದಾಯ(555) ಜಮ್ಮಭೂಮಿ : ಒಂದು ಟಿಪ್ಪಣಿ(561), ಈಗಿನ ಕಂದಾಯ ವ್ಯವಸ್ಥೆ (564), ಪ್ರಮಾಣ ದರಗಳು (565), ಭೂ ಕಂದಾಯ ವಸೂಲಿ (567), ಭೂ ಸುಧಾರಣೆ (568), ಇತರ ತೆರಿಗೆಗಳು (572), ಕೇಂದ್ರ ಸರ್ಕಾರದ ತೆರಿಗೆಗಳು (580). 547–582

ಸಂ. : ಸ್ಟೀವನ್ ಪಾಲ್

**ಅಧ್ಯಾಯ 10 ನ್ಯಾಯ ಮತ್ತು ಶಾಂತಿಪಾಲನೆ**

ಶಾಸನ ಸುವ್ಯವಸ್ಥೆಯ ಸ್ಥಿತಿ (588), ಕಾರಾಗೃಹಗಳು (596). 583–600

ಸಂ. : ಆರ್. ಮಧ್ವರಾಜ್

**ಅಧ್ಯಾಯ 11 ಇತರ ಇಲಾಖೆಗಳು**

ಅಬಕಾರಿ ಇಲಾಖೆ (601), ಅರಣ್ಯ ಇಲಾಖೆ (602), ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ (602), ಆರೋಗ್ಯ ಇಲಾಖೆ (602), ಉದ್ಯೋಗ ಮತ್ತು ತರಬೇತಿ ಇಲಾಖೆ (603), ಎನ್. ಸಿ. ಸಿ. (603), ಔಷಧ ನಿಯಂತ್ರಣ ಇಲಾಖೆ (603) ಕನ್ನಡ ಮತ್ತು ಸಂಸ್ಕೃತಿ ಇಲಾಖೆ (604), ಕಾರ್ಮಿಕ ಇಲಾಖೆ (604), ಕೃಷಿ ಇಲಾಖೆ (604), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ (604), ಗೃಹರಕ್ಷಕ ದಳ (605), ಜಿಲ್ಲಾ ಕಾರಾಗೃಹ (605), ಜಿಲ್ಲಾ ಕೇಂದ್ರ ಗ್ರಂಥಾಲಯ (605), ಜಿಲ್ಲಾ ಖಜಾನಾಧಿಕಾರಿ (605), ಜಿಲ್ಲಾ ಸಾಂಖ್ಯಿಕ ಕಛೇರಿ (606), ಜೇನು ಕೃಷಿ ಅಭಿವೃದ್ಧಿ ಅಧಿಕಾರಿ (606), ಕಾನೂನು ಮಾಪನ ಶಾಸ್ತ್ರ ಇಲಾಖೆ (606), ತೋಟಗಾರಿಕೆ ಇಲಾಖೆ (607), ನಗರ ಯೋಜನೆ (607), ಪಶುಸಂಗೋಪನೆ (607), ಪ್ರವಾಸಿ ಕಚೇರಿ (608), ಪ್ರಾದೇಶಿಕ ಸಾರಿಗೆ ಅಧಿಕಾರಿ (608), ಮಹಿಳೆಯರ, ಮಕ್ಕಳ ಕಲ್ಯಾಣ ಇಲಾಖೆ(608), ಮಾರುಕಟ್ಟೆ ಇಲಾಖೆ (608), ಮೀನುಗಾರಿಕೆ ಇಲಾಖೆ (609), ಯುವಜನ ಸೇವಾ ಮತ್ತು ಕ್ರೀಡೆ (609), ರಾಜ್ಯ ಲೆಕ್ಕಪತ್ರ ಇಲಾಖೆ (609), ರೇಷ್ಮೆ ಇಲಾಖೆ (609), ಲೋಕ ಶಿಕ್ಷಣ ಇಲಾಖೆ (610), ಲೋಕೋಪಯೋಗಿ ಇಲಾಖೆ (610), ವಾರ್ತಾ ಇಲಾಖೆ (610), ವಾಣಿಜ್ಯ ತೆರಿಗೆ ಇಲಾಖೆ (610), ವಿಮಾ ಇಲಾಖೆ (611), ಶೀಕ್ಷಣಾಲಯ (611), ಶಿಕ್ಷಣ ಇಲಾಖೆ (611), ಸರ್ಕಾರಿ ಶಾಖಾ ಮುದ್ರಣಾಲಯ (611), ಸಮಗ್ರ ಪರಿಶಿಷ್ಟ ವರ್ಗ ಅಭಿವೃದ್ಧಿ ಯೋಜನಾ ಕಚೇರಿ (612), ಸಮಾಜ ಕಲ್ಯಾಣ ಇಲಾಖೆ (612), ಸಹಕಾರ ತರಬೇತಿ ಕೇಂದ್ರ (612), ಸಹಕಾರ ಇಲಾಖೆ (612), ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಇಲಾಖೆ (613), ದೇವಸ್ಥಾನಗಳ ನಿಧಿ ವ್ಯವಸ್ಥಾಪನಾ ಸಮಿತಿ (613), ಆಹಾರ ಮತ್ತು ನಾಗರಿಕ ಸರಬರಾಜು ನಿಗಮ (613), ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ (614), ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ (614), ಕರ್ನಾಟಕ ರಾಜ್ಯ ಉಗ್ರಾಣ ನಿಗಮ (614), ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (614), ಮೀನುಗಾರಿಕೆ ಅಭಿವೃದ್ಧಿ ನಿಗಮ (614), ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (615), ಕೇಂದ್ರ ಸರ್ಕಾರದ ಇಲಾಖೆಗಳು (615), ಅಂಚೆ ಇಲಾಖೆ (615), ಜಿಲ್ಲಾ ದೂರಸಂಪರ್ಕ ಇಂಜನಿಯರ್‌ರವರ ಕಛೇರಿ (615), ತಂತಿ ಕಛೇರಿ (616), ನೆಹರು ಯುವಕ ಕೇಂದ್ರ (616), ಕಾಫಿಮಂಡಲಿ (616), ಸಾಂಬಾರ ಮಂಡಳಿ (616). 601–617

ಸಂ. : ಎಸ್. ಆರ್. ಮೈಲಾರಯ್ಯ.

**ಅಧ್ಯಾಯ 12 ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು** 619–650

ಪುರಸಭೆಗಳು (620), ಕೊಡಗು ಜಿಲ್ಲಾ ಮಂಡಲಿ (635), ಹೊಸ ಸಂಸ್ಥೆಗಳ ಮೌಲ್ಯ ಮಾಪನ (641), ಕೊಡಗು ಜಿಲ್ಲಾ ಪರಿಷತ್ತು (643), ಗ್ರಾಮಾಂತರ ನೀರುಸರಬರಾಜು ಮತ್ತು ನೈರ್ಮಲ್ಯಯೋಜನೆ(646), ವಸತಿಯೋಜನೆ (648), ನಗರ ಯೋಜನೆ (649),

ಸಂ. : ಎಂ. ಬಿ. ಪಾಟೀಲ್

ಜಿ. ಭಾನುದಾಸ್

**ಅಧ್ಯಾಯ 13 ಶಿಕ್ಷಣ ಮತ್ತು ಕ್ರೀಡೆ** 652–693

ಸಾಕ್ಷರತೆ (652), ಪೂರ್ವ ಪ್ರಾಥಮಿಕ ಶಿಕ್ಷಣ (654), ಪ್ರಾಥಮಿಕ ಶಿಕ್ಷಣ (655), ಪ್ರೌಢ ಶಿಕ್ಷಣ (667), ತಾಂತ್ರಿಕ ಶಿಕ್ಷಣ (681), ವಯಸ್ಕರ ಶಿಕ್ಷಣ (686), ಕಾಲೇಜು ಶಿಕ್ಷಣ (687), ಗ್ರಂಥಾಲಯಗಳು (688), ಕ್ರೀಡೆ (689).

ಸಂ. : ಟಿ. ಜಿ. ನರಸಿಂಹ ಮೂರ್ತಿ

**ಅಧ್ಯಾಯ 14 ಸಾಹಿತ್ಯ ಮತ್ತು ಸಂಸ್ಕೃತಿ** 694–745

ಕೊಡವ ಭಾಷಾ ಬರಹಗಾರರು (707), ಜಾನಪದ (711), ರಂಗಭೂಮಿ (722), ಶಿಲ್ಪ ಮತ್ತು ಚಿತ್ರಕಲೆ (728), ನೃತ್ಯ ಮತ್ತು ಸಂಗೀತ (729), ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಘ – ಸಂಸ್ಥೆಗಳು (733), ಪತ್ರಿಕೋದ್ಯಮ (737).

ಸಂ. : ಲಕ್ಷ್ಮಣ್ ತೆಲಗಾವಿ

**ಅಧ್ಯಾಯ 15 ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು** 746–779

ಜನನ ಮರಣ ಅಂಕಿಅಂಶಗಳು (750), ಮಾದರಿ ನೋಂದಣಿ ವ್ಯವಸ್ಥೆ (750), ಸಾಂಕ್ರಾಮಿಕ ರೋಗಗಳು (753), ಆರೋಗ್ಯ ಸಂಸ್ಥೆಗಳು (756), ಕುಟುಂಬ ಕಲ್ಯಾಣ (772),ಸ್ತ್ರೀಯ ಮತ್ತು ಮಕ್ಕಳ ಆರೋಗ್ಯ(775), ಔಷಧನಿಯಂತ್ರಣ ಇಲಾಖೆ(778).

ಸಂ. : ಎಸ್. ಎನ್. ರಾಮಚಂದ್ರಯ್ಯ

ದೇವರಕೊಂಡಾರೆಡ್ಡಿ

**ಅಧ್ಯಾಯ 16 ಇತರ ಸಮಾಜ ಸೇವಾ ಸೌಲಭ್ಯಗಳು** 780–809

ಕಾರ್ಮಿಕರ ಕಲ್ಯಾಣ (780), ಪರಿಶಿಷ್ಟ ಜಾತಿಗಳ ಕಲ್ಯಾಣ (783), ಹಿಂದುಳಿದ ವರ್ಗಗಳ ಕಲ್ಯಾಣ (792), ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ (796), ಅಂಗವಿಕಲರ ಕಲ್ಯಾಣ (802), ಇತರ ಕಲ್ಯಾಣ ಯೋಜನೆಗಳು (804), ವಕ್ಫ್ ಸಂಸ್ಥೆಗಳು (806), ಸ್ವಯಂ ಸೇವಾ ಸಂಸ್ಥೆಗಳು (807).

ಸಂ. : ಎಸ್. ಆರ್. ಮೈಲಾರಯ್ಯ

**ಅಧ್ಯಾಯ 17 ಪ್ರೇಕ್ಷಣೀಯ ಸ್ಥಳಗಳು** 810–854

ಸಂ. : ಎಸ್. ಎ. ಜಗನ್ನಾಥ

ಪರಿಶಿಷ್ಟ : 1. ಜಿಲ್ಲಾಧಿಕಾರಿಗಳ ಪಟ್ಟಿ [855], 2. ಗ್ರಾಮಗಳ ಪಟ್ಟಿ [856] 3. ಕೊಡವ ಮನೆತನಗಳು[864] 4. ಗೌಡಜನಾಂಗ[869]

ಸಂ. : ದೇವರಕೊಂಡಾರೆಡ್ಡಿ

ಆಯ್ದ ಆಕರ ಗ್ರಂಥಗಳ ಪಟ್ಟಿ[873],ಶಬ್ದಸೂಚಿ [882],ಒಪ್ಪೋಲೆ [931], ಸೇರ್ಪಡೆ [937], ಪಕ್ಷಿನೋಟ [943].

# ಗ್ಯಾಸೆಟಿಯರ್ ಇಲಾಖಾ ಸಲಹಾ ಸಮಿತಿ

**ಅಧ್ಯಕ್ಷರು**

ಶ್ರೀ ಟಿ. ಪಿ. ಇಸ್ಸರ್, ಐ. ಎ. ಎಸ್.
ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ
(15–6–1992 ರ ವರೆಗೆ)

ಶ್ರೀ ಜೆ. ಅಲೆಕ್ಸಾಂಡರ್, ಐ. ಎ. ಎಸ್.
ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ
(16–6–1992ರಿಂದ)

**ಸದಸ್ಯರು :**

ಶ್ರೀ ಹ. ನಾಗರಾಜ ಶೆಟ್ಟಿ, ಐ. ಎ. ಎಸ್.
ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಾರ್ತಾ, ಪ್ರವಾಸೋದ್ಯಮ ಹಾಗೂ
ಯುವಜನ ಸೇವಾ ಇಲಾಖೆ.
(10–7–1992ರ ವರೆಗೆ)

ಶ್ರೀ ಫಿಲಿಪೋಸ್ ಮಥಾಯ್, ಐ. ಎ. ಎಸ್.
ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಾರ್ತಾ, ಪ್ರವಾಸೋದ್ಯಮ ಹಾಗೂ
ಯುವಜನ ಸೇವಾ ಇಲಾಖೆ
(11–7–1992 ರಿಂದ)

ಶ್ರೀ ಕೆ. ಬಾಲಸುಬ್ರಹ್ಮಣ್ಯಂ,
ಐ. ಎ. ಎಸ್. (ನಿವೃತ್ತ), 341, 1ನೇ ಬ್ಲಾಕ್,
ಜಯನಗರ, ಬೆಂಗಳೂರು.

ಪ್ರೊ॥ ಬಿ. ಷೇಕ್ ಅಲಿ
59, 3ನೇ ಅಡ್ಡರಸ್ತೆ,
7ನೇ ಮೈನ್, ಸರಸ್ವತೀಪುರಂ,
ಮೈಸೂರು–570 009

ಶ್ರೀ ಜಯಕುಮಾರ್ ಅನಗೋಳ್
ಐ. ಎ. ಎಸ್. (ನಿವೃತ್ತ),
109, 6ನೇಯ ಮೈನ್, ವಿಜಯನಗರ,
ಬೆಂಗಳೂರು–90

ರೆ॥ ಸಿ. ಜೆ. ಸಲ್ಡಾನಾ
ಡೈರೆಕ್ಟರ್, ಟ್ಯಾಕ್ಸಾನಮಿಕ್ ಸ್ಟಡೀಸ್,
ಫಾದರ್ಸ್ ರೆಸಿಡೆನ್ಸಿ ಬ್ಲಾಕ್,
ಸೆಂಟ್ ಜೋಸೆಫ್ಸ್ ಕಾಲೇಜ್ ಕಾಂಪೌಂಡ್,
ಬೆಂಗಳೂರು–25

ಡಾ॥ ಕಾಳೇಗೌಡ ನಾಗವಾರ,
ರೀಡರ್, ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು–6

ಪ್ರೊ॥ ಶಾಂತರಸ,
ಸ್ಟೇಷನ್ ಏರಿಯಾ,
ಆಜಾದ್ ನಗರ, ರಾಯಚೂರು–1

ಡಾ॥ ಕೆ. ಪುಟ್ಟಸ್ವಾಮಯ್ಯ
3ನೇ ಅಡ್ಡರಸ್ತೆ, 2ನೇ ಬ್ಲಾಕ್
3ನೇ ಫೇಸ್, ಪಶ್ಚಿಮ ಕಾರ್ಡ್ ರಸ್ತೆ,
ಬೆಂಗಳೂರು–79

**ಕೊಡಗು ಜಿಲ್ಲಾ ಗ್ಯಾಸೆಟಿಯರ್‌ಗಾಗಿ ವಿಶೇಷ ನೇಮಕಾತಿ :**

ಶ್ರೀ ಬಿ. ಡಿ. ಗಣಪತಿ
(ಲೇಖಕರು), ದೇವಾಲಯ ರಸ್ತೆ,
ಮಡಿಕೇರಿ.

ಶ್ರೀ ಎದುರ್ಕಳ ಕೆ. ಶಂಕರನಾರಾಯಣ ಭಟ್
ಲೇಖಕರು
ಭಾಗಮಂಡಲ–571247

**ಕಾರ್ಯದರ್ಶಿ :**

ಡಾ॥ ಸೂರ್ಯನಾಥ ಯು. ಕಾಮತ್
ಮುಖ್ಯ ಸಂಪಾದಕರು
ಕರ್ನಾಟಕ ಗ್ಯಾಸೆಟಿಯರ್ ಇಲಾಖೆ,
ಬೆಂಗಳೂರು–560 009

# ಗ್ಯಾಸೆಟಿಯರ್ ಇಲಾಖೆಯ ಸಿಬ್ಬಂದಿ ವರ್ಗ

| | | |
|---|---|---|
| 1. | ಡಾ॥ ಸೂರ್ಯನಾಥ ಯು. ಕಾಮತ್ | ಮುಖ್ಯ ಸಂಪಾದಕ |
| 2. | ಶ್ರೀ ಎಸ್. ಎನ್. ರಾಮಚಂದ್ರಯ್ಯ | ಸಂಪಾದಕ |
| 3. | ಶ್ರೀ ಎಂ. ಬಿ. ಪಾಟೀಲ್ | " |
| 4. | ಶ್ರೀ ಎಚ್. ಎಂ. ರಂಗೇಗೌಡ | " |
| 5. | ಶ್ರೀ ಎಸ್. ಎ. ಜಗನ್ನಾಥ್ | " |
| 6. | ಶ್ರೀ ಆರ್. ಮಧ್ವರಾಜ್ | " |
| 7. | ಶ್ರೀ ಎಸ್. ಲಕ್ಷ್ಮೀನಾರಾಯಣ ಶೆಟ್ಟಿ | " |
| 8. | ಶ್ರೀ ಎಸ್. ಎನ್. ರಾಜು | " |
| 9. | ಶ್ರೀ ಲಕ್ಷ್ಮಣ್ ತೆಲಗಾವಿ | " |
| 10. | ಶ್ರೀ ಎಸ್. ಆರ್. ಮೈಲಾರಯ್ಯ | " |
| 11. | ಶ್ರೀ ಟಿ. ಜಿ. ನರಸಿಂಹ ಮೂರ್ತಿ | " |
| 12. | ಶ್ರೀ ಯು. ರಾಮಮೂರ್ತಿ | " |
| 13. | ಶ್ರೀ ಸ್ಟೀವನ್ ಪಾಲ್ | ಅನ್ವೇಷಕ |
| 14. | ಶ್ರೀ ಜಿ. ಭಾನುದಾಸ್ | " |
| 15. | ಶ್ರೀ ಆರ್. ಜಿ. ಕುಲಕರ್ಣಿ | " |
| 16. | ಶ್ರೀ ಎ. ಲಕ್ಷ್ಮೀನರಸಿಂಹನ್ | " |
| 17. | ಶ್ರೀ ದೇವರಕೊಂಡಾರೆಡ್ಡಿ | " |
| 18. | ಶ್ರೀ ಬಿ. ಸಿ. ರೇವಣ್ಣ | ಸಹಾಯಕ (ಅಧೀಕ್ಷಕ, ಪ್ರಭಾರ) |
| 19. | ಶ್ರೀ ಎಸ್. ರಾಘವೇಂದ್ರರಾವ್ | ಸಹಾಯಕ |
| 20. | ಶ್ರೀಮತಿ ಸಿ. ಆರ್. ಲೀಲಾವತಿ | ಕಿರಿಯ ಸಹಾಯಕರು |
| 21. | ಶ್ರೀಮತಿ ಕೌಸಲ್ಯಾ ಬಲರಾಂ | ಶೀಘ್ರಲಿಪಿಗಾರರು |
| 22. | ಶ್ರೀ ಸಿ. ಎನ್. ಮಾಧುರಾವ್ | ಹಿರಿಯ ಬೆರಳಚ್ಚುಗಾರರು |
| 23. | ಶ್ರೀ. ಅಬ್ದುಲ್ ಖುದ್ದೂಸ್ | ಬೆರಳಚ್ಚುಗಾರ |
| 24. | ಶ್ರೀಮತಿ ಟಿ. ಮೀನಾಕುಮಾರಿ | ಬೆರಳಚ್ಚುಗಾರ |
| 25. | ಶ್ರೀ ಜಿ. ಎಸ್. ಪಾಟೀಲ್ | ಗ್ರಂಥಪಾಲಕ ಮತ್ತು ಸಹಾಯಕ |
| 26. | ಶ್ರೀ. ಎಂ. ಬಾಬು | ವಾಹನ ಚಾಲಕ |
| 27. | ಶ್ರೀ ತಮ್ಮಣ್ಣ | ದಫೇದಾರ |
| 28. | ಶ್ರೀ ಬೀರಯ್ಯ | 'ಡಿ' ವೃಂದದ ನೌಕರರು |
| 29. | ಶ್ರೀ ಎಚ್. ಚಂದ್ರ | " |
| 30. | ಶ್ರೀ ಬಿ. ಸಿ. ಸುರೇಶ್‌ಕುಮಾರ್ | " |

# ಛಾಯಾಚಿತ್ರಗಳು


**ಕೃತಜ್ಞತೆಗಳು :**

**ಶ್ರೀಯುತರುಗಳಾದ :**

ಕೆ. ಎಸ್. ಎಸ್. ಐಯರ್, ಅರಣ್ಯ ಇಲಾಖೆ

ಪಿ. ಎಸ್. ಚಂದ್ರಶೇಖರ್

ಕೇಸರ್ ಸಿಂಗ್

ಎ. ಲಕ್ಷ್ಮೀನರಸಿಂಹನ್

ದೇವರಕೊಂಡಾರೆಡ್ಡಿ

ಕೇಂದ್ರ ಪುರಾತತ್ವ ಇಲಾಖೆ, ಬೆಂಗಳೂರು ವೃತ್ತ
ಬೆಂಗಳೂರು,

ರಾಜ್ಯ ಪುರಾತತ್ವ ಮತ್ತು ವಸ್ತುಪ್ರದರ್ಶನಾಲಯಗಳ ಇಲಾಖೆ,
ಮೈಸೂರು.

ಮತ್ತು ಇತರ ವಿವಿಧ ಇಲಾಖೆಗಳು.